**ದಿನಾಂಕಃ 18-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಹೆಚ್.ಪಿ.ಡಿ. ವಾದಿಯ ಪರ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಬರೆಯಲು ನಾನೇ ಮಾಹಿತಿ ನೀಡಿರುತ್ತೇನೆ. ಮೃತ ಶಿದ್ದಪ್ಪ ನನಗೆ ಮಾವನಾಗಬೇಕು. ಸದರಿ ಶಿದ್ದಪ್ಪನಿಗೆ ಇಬ್ಬರು ಗಂಡು ಮಕ್ಕಳು,ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. ಸದರಿ ಶಿದ್ದಪ್ಪನ ಹೆಂಡತಿ ಜೀವಂತ ಇದ್ದಾಳೆ. ಸದರಿಯವರುಗಳನ್ನು ಬಿಟ್ಟು ಶಿದ್ದಪ್ಪನಿಗೆ ಬೇರೆ ವಾರಸುದಾರರು ಇಲ್ಲ ಎಂದರೆ ಸರಿ.

**2.** ಶಿದ್ದಪ್ಪನಿಗೆ ಆಸ್ತಿಗಳು ಅವರ ತಂದೆಯಿಂದ ಬಂದಿರುತ್ತದೆ. 1984 ರಲ್ಲಿ ಡ ನಂಬರ 1840 ರ ಪ್ರಕಾರ ಶಿದ್ದಪ್ಪ ಮತ್ತು ಆತನ ಸಹೋದರರು ಮತ್ತು ಸಹೋದರಿಯರು ಪಾಲು ವಿಭಾಗ ಮಾಡಿಕೊಂಡಿದ್ದರ ಪ್ರಕಾರ ಶಿದ್ದಪ್ಪನಿಗೆ ಆಸ್ತಿಗಳು ಬಂದಿರುತ್ತದೆ ಎಂದರೆ ಸರಿ. 1995 ರಲ್ಲಿ ಶಿದ್ದಪ್ಪ ಮತ್ತು ಆತನ ಗಂಡು ಮಕ್ಕಳು ಆಸ್ತಿಗಳಲ್ಲಿ ಪಾಲು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಆ ಕಾಲಕ್ಕೆ ಶಿದ್ದಪ್ಪನ ಹೆಂಡತಿ ಮತ್ತು ಮಕ್ಕಳಾದ ವಾದಿಯರನ್ನು ಬಿಟ್ಟು ಅವರಿಗೆ ಗೊತ್ತಿಲ್ಲದಂತೆ ಮೋಸ ಮಾಡಿ ಪಾಲು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆ ಕಾಲಕ್ಕೆ ' ಯು ' ನೋಟಿಸಗೆ ವಾದಿಯರು ಸಹಿ ಮಾಡಿಲ್ಲ, ಅವರಿಗೆ ಗೊತ್ತಿಲ್ಲದಂತೆ ಪಾಲು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

3. ಶಿದ್ದಪ್ಪನ ಮಕ್ಕಳಲ್ಲಿ ಒಬ್ಬ ಮಗ ಭರಮಪ್ಪನನ್ನು ದತ್ತಕಕ್ಕೆ ಹೋಗಿರುತ್ತಾರೆ ಎಂದರೆ ಸರಿ. ಸದರಿಯವರನ್ನು ದುರ್ಗಪ್ಪ ಎನ್ನುವವರಿಗೆ ದತ್ತಕಕ್ಕೆ ಕೊಟ್ಟಿರುತ್ತಾರೆ. ದುರ್ಗಪ್ಪನ ಆಸ್ತಿ ಮತ್ತು ಶಿದ್ದಪ್ಪನ ಆಸ್ತಿಗಳು ಸಮವಾಗಿಯೇ ಇದ್ದವು ಎಂದರೆ ಸರಿ. ಆ ಕಾಲಕ್ಕೆ ಶಿದ್ದಪ್ಪನ ಗಂಡು ಮಕ್ಕಳಾದ ಭರಮಪ್ಪ ಮತ್ತು ಕರಿಯಪ್ಪ ವಾದಿಯರಿಗೆ ಗೊತ್ತಿಲ್ಲದಂತೆ ಆಸ್ತಿಗಳನ್ನು ಹಂಚಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ವಾದಿಯರೆ

ಮುಂದೆ ನಿಂತು ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಆ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ನಂ. 1,2,3 ಮತ್ತು 5 ಆಸ್ತಿಗಳು ಶಿದ್ದಪ್ಪನಿಗೆ ಬಂದಂತಹ ಆಸ್ತಿಗಳು ಎಂದರೆ ಸರಿ. ಸದರಿ ಆಸ್ತಿಗಳನ್ನು ಬಿಟ್ಟರೆ ಶಿದ್ದಪ್ಪನಿಗೆ ಬೇರೆ ಆಸ್ತಿಗಳು ಇರಲಿಲ್ಲ ಎಂದರೆ ಸರಿ.

**4.** ನನ್ನ ತಕರಾರಿನಲ್ಲಿ ಶಿದ್ದಪ್ಪರವರಿಗೆ ಬೇರೆ ಆಸ್ತಿಗಳು ಇದ್ದವು ಮತ್ತು ಬೇರೆ ವಾರಸುದಾರರು ಇದ್ದಾರೆ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. 2 ಮತ್ತು 3 ನೇ ವಾದಿಯರ ಮದುವೆ ಸಮಯದಲ್ಲಿ ಆಸ್ತಿಗಳನ್ನು ಮಾರಾಟ ಮಾಡಿ ಮದುವೆ ಮಾಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿಯವರ ಮದುವೆ ಕಾಲಕ್ಕೆ ನಾವು ಯಾವುದೇ ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಸದರಿಯವರ ಮದುವೆ ಕಾಲಕ್ಕೆ ಬೆಳ್ಳಿ ಬಂಗಾರ ಕೊಟ್ಟಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶಿದ್ದಪ್ಪನ ಆಸ್ತಿಗಳಲ್ಲಿ ವಾದಿಯರಿಗೆ ಹಿಸ್ಸೆ ಇದೆ ಎಂದರೆ ಸಾಕ್ಷಿಯು ಅವರು ಕಬ್ಜೆಯನ್ನು ಬಿಟ್ಟುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

ಮರು ವಿಚಾರಣೆ – ಇಲ್ಲ
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

**ಓ ಹೇ ಕೇ ಸರಿ ಇದೆ.**

-ಸಹಿ-

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಹಾವೇರಿ.**